ಇ)	೧. ಶಾಲಾ ತರಗತಿಗಳು	—	೭
	೨. ಕಛೇರಿ ಕೊಠಡಿ	—	೧
	೩. ಪ್ರಾಚಾರ್ಯರ ಕೊಠಡಿ	—	೧
	೪. ಶಿಕ್ಷಕ ೩ಬ್ಬಂದಿ ವರ್ಗ, ಗ್ರಂಥಾಲಯ, ಪ್ರಯೋಗಾಲಯ, ಆಟೋಪಕರಣಗಳು, ಆಡಿಯೋವಿಷುಯಲ್ ಉಪಕರಣಗಳು, ಹೆಣ್ಣುಮಕ್ಕಳ ನಿರೀಕ್ಷಣಾ ಕೊಠಡಿ, ಕ್ರಾಫ್ಟ್ ಕೊಠಡಿ (ಎಲ್ಲವೂ ಒಂದೇ ಕೊಠಡಿಯಲ್ಲಿರುತ್ತದೆ)	—	೧

ಧಾರವಾಡದಲ್ಲಿಯಂ ಕೃಷಿ ಕಾಲೇಜು ಬಿ.ಎಸ್‌ಸಿ. (ಅರಣ್ಯ) ತರಬೇತಿ ಹೊಂದಿದವರಿಗೆ ಆದ್ಯತೆಯ ಆಧಾರದ ಮೇಲೆ ಉದ್ಯೋಗವನ್ನು ಒದಗಿಸುವ ಬಗ್ಗೆ

೭೫೯(೧೪೫೯) ಶ್ರೀ ಎನ್. ಜಿ, ನಾಯ್ಕ (ಹೊಳಕಾಲ್ಮೂರು).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಧಾರವಾಡ ಕೃಷಿ ಕಾಲೇಜಿನಲ್ಲಿ ಅರಣ್ಯ ವಿಷಯ ಬೋಧನೆಗೆ ಮಂಜೂರಾತಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಆ ಕಾಲೇಜಿನಲ್ಲಿ ಎಷ್ಟು ವಿದ್ಯಾರ್ಥಿಗಳು ಬಿ.ಎಸ್ಸಿ (ಅರಣ್ಯ) ತರಬೇತಿ ಹೊಂದಿದ್ದಾರೆ?

ಇ) ಹಾಗಿದ್ದಲ್ಲಿ, ಅವರಿಗೆ ಅರಣ್ಯ ಇಲಾಖೆಯಲ್ಲಿ ಆದ್ಯತೆಯ ಆಧಾರದ ಮೇಲೆ ಉದ್ಯೋಗವನ್ನು ಒದಗಿಸಲಾಗುವುದೆ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

ಅ) ಹೌದು.

ಆ) ೧೯೮೯–೯೦ರ ಸಾಲಿನಲ್ಲಿ ನಾಲ್ಕು ವಿದ್ಯಾರ್ಥಿಗಳು.

ಇ) ಅರಣ್ಯ ಇಲಾಖೆಯ ಕೆಲವು ಹುದ್ದೆಗಳ ನೇಮಕಾತಿಗೆ ಬಿ.ಎಸ್ಸಿ (ಅರಣ್ಯ) ಪದವಿ ಶಿಕ್ಷಣ ಅರ್ಹತೆ ನಿಗದಿಗೊಳಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಮೈಸೂರಿನ ಗಣೇಶ ಚಿತ್ರಮಂದಿರದ ಬಳಿ ಕಟ್ಟುತ್ತಿರುವ ನಗರಪಾಲಿಕೆಯ ವಾಣಿಜ್ಯ ಸಂಕೀರ್ಣದ ಬಗ್ಗೆ

೭೬೦(೧೫೮೬ಬಿ) ಶ್ರೀ ಕೆ. ಹರ್ಷಕುಮಾರಗೌಡ (ಚಾಮರಾಜ).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಮೈಸೂರಿನ ಗಣೇಶ ಚಿತ್ರಮಂದಿರದ ಮುಂಭಾಗದಲ್ಲಿ ಕಟ್ಟುತ್ತಿರುವ ನಗರಪಾಲಿಕೆಯ ವಾಣಿಜ್ಯ ಸಂಕೀರ್ಣದ ನಿರ್ಮಾಣ ಕಾರ್ಯ ಸ್ಥಗಿತಗೊಂಡಿರುವುದರ ಕಾರಣವೇನು?

ಆ) ಇದರ ನಿರ್ಮಾಣ ಕಾರ್ಯ ಯಾವಾಗ ಪುನರಾರಂಭ ಮಾಡಲಾಗುವುದು ಮತ್ತು ನಿರ್ಮಾಣ ಕಾರ್ಯ ಎಂದು ಪೂರ್ಣಗೊಳ್ಳುವುದು.

ಇ) ಈ ಸಂಕೀರ್ಣದ ನಿರ್ಮಾಣಕ್ಕೆ ವಿನಿಯೋಗವಾಗುತ್ತಿರುವ ಹಣದ ಮೊತ್ತವೆಷ್ಟು?